ಕತ್ತಲಿನಲ್ಲಿ ಆ ಸಜ್ಜನ ಅವನನ್ನು ತಡೆದ, "ಹೀಗೆ ನೀನು ನಡುರಾತ್ರಿಯವರೆಗೆ ಈ ನಿರುದ್ಯೋಗಿ ಮತ್ತು ಕೆಲಸಕ್ಕೆ ಬಾರದ ಹುಡುಗರನ್ನು ಮನೆಯೊಳಗೆ ಸೇರಿಸಿ ಗಲಾಟೆ ಮಾಡುತ್ತಿರುವುದು ನಿನಗೆ ಖಂಡಿತ ಶೋಭೆ ತರುವಂಥದ್ದಲ್ಲ. ಬ್ಯಾರಿಸ್ಟರ್ ಗಾಂಧಿಯಂಥ ಬುದ್ಧಿವಂತರ ಮಗನಾಗಿ, ನೀನು ಹೀಗೆ ವ್ಯರ್ಥವಾಗಿ ಅಲೆಯುತ್ತೀಯ, ಇದು ನಿನ್ನ ಕೆಟ್ಟ ಕೆಲಸಗಳ ಪರಿಣಾಮವಾಗಿದೆ.'

ಹರಿಲಾಲ ಅಲ್ಲಿಯೇ ಸ್ಥಿರವಾಗಿ ನಿಂತುಬಿಟ್ಟ.

ನಂತರ ಒಂದು ಶಬ್ದವನ್ನೂ ಸಹ ಹೇಳದೆ ವೇಗದ ಹೆಜ್ಜೆಗಳೊಂದಿಗೆ ಮನೆಯೊಳಗೆ ನುಗ್ಗಿ ಹೋದ. ಅಂದು ರಾತ್ರಿ ಅವನು ನಿದ್ರೆ ಮಾಡುವುದಕ್ಕೂ ಮೊದಲೆ ಒಂದು ನಿರ್ಧಾರಕ್ಕೆ ಬಂದ

ನಾಳೆ ಮುಂಜಾನೆಯೇ ರಾಜಕೋಟಕ್ಕೆ ಹೋಗಿ ಗುಲಾಬ ಮತ್ತು ಮಕ್ಕಳನ್ನು ಇಲ್ಲಿಗೆ ಕರೆತರುತ್ತೇನೆ. ಅಲ್ಪಸ್ವಲ್ಪ ಸಹಾಯವನ್ನು ರೇವಾ ಶಂಕರ್ ಮಾಡುತ್ತಾರೆ, ಇನ್ನು ಅಲ್ಪಸ್ವಲ್ಪ ತಾನು ಖುದ್ದು ಕೆಲಸವನ್ನು ಮಾಡುತ್ತೇನೆ. ಒಂದು ವೇಳೆ ಇಂದಿನ ತನ್ನ ಜೀವನದಿಂದ ಬಾಪೂ ಅವರ ಹೆಸರಿಗೆ ಕಳಂಕ ಹತ್ತುವುದಾದರೆ, ತಾನು ಬಾಪೂ ಅವರ ಹೆಸರಿನಲ್ಲಿ ರೇವಾ ಶಂಕರ್ ಅವರಿಂದ ಸಹಾಯವನ್ನು ಪಡೆಯುವುದೇ ಲೇಸು.

## ಹದಿನೇಳು

ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗೆ ಈಗ ಹರಿಲಾಲನ ಗೃಹಸ್ಥ ಜೀವನ ಅಹಮದಾಬಾದ್‌ನಲ್ಲಿ ಆರಂಭಗೊಂಡಿತ್ತು. ಮಿತ್ರರ ಜೊತೆಯಲ್ಲಿ ಗೇಲಿ ಮಾಡಿಕೊಂಡು, ಯಾವುದೇ ಅಡ್ಡಿಆತಂಕವಿಲ್ಲದ ಜೀವನವನ್ನು ಅವನು ಕಳೆದಿದ್ದ, ಹೀಗಾಗಿ ಅವನು ಆ ಅಭ್ಯಾಸವನ್ನು ಬಿಟ್ಟಿರಲಿಲ್ಲ, ಆದರೆ ಆ ಜೀವನದ ಬಗ್ಗೆ ಅಲ್ಪಸ್ವಲ್ಪ ನಿಯಂತ್ರಣ ಬಂದಿತ್ತು. ಮನೆಯ ಖರ್ಚಿಗೆ ಅಗತ್ಯವಾದ ಹಣದ ಕೊರತೆ ನಿರಂತರವಾಗಿ ಕಾಡುತ್ತಿತ್ತು; ಈ ಚಿಂತೆಯಲ್ಲಿಯೇ ದಿನೇದಿನೇ ಅವನ ಮನಸ್ಸು ವಿದ್ಯಾಭ್ಯಾಸದ ಬಗ್ಗೆ ಆಸಕ್ತಿಯನ್ನು ಕಳೆದುಕೊಳ್ಳುತ್ತಿತ್ತು. ಆಫ್ರಿಕಾದಿಂದ ಹೊರಡುವಾಗ ವಿದ್ಯಾಭ್ಯಾಸದ ಬಗ್ಗೆ ಇದ್ದ ಆಕರ್ಷಣೆ, ಈಗ ಕುಂದಿತ್ತು. ಇದಕ್ಕೆ ಪ್ರತಿಯಾಗಿ ವಿದ್ಯಾಭ್ಯಾಸ ನಿತ್ಯ ಹೆಚ್ಚೆಚ್ಚು ಹಿನ್ನಡೆಯಲ್ಲಿ ಸಾಗಿತ್ತು. ತರಗತಿಯಲ್ಲಿ ಈ ಅಪೂರ್ಣತೆ ಎದುರಾದಾಗ ಶಿಕ್ಷಕರೊಂದಿಗೆ ಎಲ್ಲರೂ ಅವನನ್ನು ಅಪಹಾಸ್ಯದ ದೃಷ್ಟಿಯಿಂದ ನೋಡುತ್ತಿದ್ದರು, ಇದರಿಂದ ಹರಿಲಾಲನ ಕ್ಷೋಭೆ ಮತ್ತೂ ಹೆಚ್ಚುತ್ತಿತ್ತು. ಅಲ್ಲದೆ ಅವನಿಗಿಂತ ಹತ್ತು ವರ್ಷ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳು ಅವನನ್ನು ನೋಡುವ ದೃಷ್ಟಿಯಿಂದ, ತನ್ನ ವಿದ್ಯಾಭ್ಯಾಸಕ್ಕೆ ಗ್ರಹಣ ಬಡಿದಿದೆ ಎಂಬ ಭಾವನೆ ಅವನನ್ನು ಘೇರಾಯಿಸುತ್ತಿತ್ತು.

ಬಹುಶಃ ಈ ಗಳಿಗೆಯಿಂದ ಪಾರಾಗಲು ಅವನು ನಿರುದ್ಯೋಗಿ ಮಿತ್ರರೊಂದಿಗೆ ಕೂತು ಚದುರಂಗದಾಟವನ್ನು ಆಡುತ್ತಾ ಸಮಯವನ್ನು ಕಳೆಯುತ್ತಿದ್ದ. ರಾಮಿ ಮತ್ತು ಕಾಂತಿಯನ್ನು ನೋಡಿದಾಗ, ತಾನು ತಪ್ಪೆಸಗುತ್ತಿದ್ದೇನೆ ಎಂಬ ಭಾವನೆ ಅವನನ್ನು ಕಳವಳಕ್ಕೀಡು ಮಾಡುತ್ತಿತ್ತು. ಗುಲಾಬ ತನ್ನ ಪತಿಯ ಭಾವನೆಗಳು ಮತ್ತು ವ್ಯಥೆಯನ್ನು ಅರ್ಥ ಮಾಡಿಕೊಳ್ಳುತ್ತಿರಲಿಲ್ಲ ಎಂದೇನೂ ಅಲ್ಲ, ಆದರೆ ಪತಿ ಆಫ್ರಿಕಾವನ್ನು ತ್ಯಜಿಸಿ ಒಮ್ಮೆಲೆ ಹೊಸ ಜೀವನವನ್ನು ಆರಂಭಿಸಿದ್ದು ಗುಲಾಬಳಿಗೆ ಸರಿ ಕಾಣುತ್ತಿರಲಿಲ್ಲ. ಆದರೆ ಗುಲಾಬ ತನ್ನ ಅನಿಚ್ಛೆಯನ್ನು ಹರಿಲಾಲನ ಇಷ್ಟ ಮತ್ತು ಇಷ್ಟವಿಲ್ಲದ ಸಂಗತಿಗಳಲ್ಲಿ ಬಡವಾಗಿಸಿದ್ದಳು. ಅವಳು ತನ್ನ ಅನಿಚ್ಛೆಯನ್ನು ನೆನಪಿಸಿಕೊಂಡಾಗ, ಅವಳೆದುರು ತನ್ನ ಅತ್ತೆ ಕಸ್ತೂರಬಾ ಅವರ ಮುಖ ಮೂಡುತ್ತಿತ್ತು. ಅತ್ತೆಯಾದರೂ ಸಹ ಮತ್ತೇನು ಮಾಡಿದ್ದರು? ಅವರು ಪತಿಯ ಇಚ್ಛೆಯ ಎದರು ತಮ್ಮ ಇಚ್ಛೆಗಳನ್ನು ಬಲಿ ಕೊಟ್ಟಿರಲಿಲ್ಲವೇ? ಗಾಂಧಿ ಪರಿವಾರದ ಈ ಪರಂಪರೆಯನ್ನು ಗುಲಾಬ ಹೇಗೆ ಮುರಿಯಲು ಸಾಧ್ಯವಿತ್ತು? ಗುಲಾಬ ಈ ಪರಿವಾರದ ಸೊಸೆಯಾಗಿದ್ದಳು. ತನ್ನ ಅತ್ತೆಯ ಮಾರ್ಗದಲ್ಲಿ ನಡೆಯುವುದು ಅವಳ ಕರ್ತವ್ಯವಾಗಿತ್ತು.

ಆದರೆ ಗುಲಾಬಳಿಗೆ ಅಹಮದಾಬಾದ್‌ನ ಈ ಗೃಹಸ್ಥಜೀವನ ಹಿಡಿಸಲಿಲ್ಲ. ಇದಕ್ಕಿಂತಲೂ ಆಫ್ರಿಕಾದ ಜೀವನ ತುಂಬಾ ಚೆನ್ನಾಗಿತ್ತೆಂದು ಅವಳು ಸದಾ ಒಪ್ಪಿಕೊಳ್ಳುತ್ತಿದ್ದಳು. ಆದರೆ ಅವಳು ಪತಿಯ ಮಾತನ್ನು ವಿರೋಧಿಸುತ್ತಿರಲಿಲ್ಲ, ಆದರೆ ಅವಳ ಮನಸ್ಸು ಹರಿಲಾಲನಿಗಿಂತಲೂ ಹೆಚ್ಚು ವ್ಯಗ್ರವಾಗಿತ್ತು.

ಹರಿಲಾಲ ಮೆಟ್ರಿಕ್ ಪರೀಕ್ಷೆಯಲ್ಲಿ ಅನುತ್ತೀರ್ಣನಾದ. ಇದನ್ನು ಹರಿಲಾಲ ನಿರೀಕ್ಷಿಸಿದ್ದ. ತಾನು ಪರೀಕ್ಷೆಯಲ್ಲಿ ಏನು ಬರೆದು ಬಂದಿದ್ದೇನೆಂದು ಅವನಿಗೆ ತಿಳಿದಿತ್ತು. ಆದರೆ ಅದನ್ನು ಅವನು ಗುಲಾಬಳಿಗೆ ಹೇಳಿರಲಿಲ್ಲ. ಪತಿಯ ಬಗ್ಗೆ ಶ್ರದ್ಧೆಯನ್ನಿಟ್ಟಿದ್ದ ಗುಲಾಬ ಅಸ್ವಸ್ಥಳಾದಳು. ಅಂದು ರಾತ್ರಿ ಅವಳಿಂದ ತನ್ನ ವ್ಯಥೆಯನ್ನು ತಡೆದುಕೊಳ್ಳಲಾಗಲಿಲ್ಲ. ಅವಳು ಪತಿಗೆ ಮೆಲ್ಲನೆ ಹೇಳಿದಳು 'ಸ್ವಾಮಿ, ನನ್ನದೊಂದು ಮಾತನ್ನು ಕೇಳುತ್ತೀರ?' ಅವಳು ಹರಿಲಾಲನನ್ನೇ ನೋಡುತ್ತಾ ಕರುಣೆಯ ಧ್ವನಿಯಲ್ಲಿ ಹೇಳಿದಳು. ಅಂದು ಇಡೀ ದಿನವನ್ನು ಹರಿಲಾಲ ವ್ಯಗ್ರತೆಯಲ್ಲಿಯೇ ಕಳೆದಿದ್ದ. ಪರೀಕ್ಷೆಯ ಫಲಿತಾಂಶ ಹೊರಬಿದ್ದ ನಂತರ ಅವನು ಮನೆಗೆ ಬರುವುದಕ್ಕೆ ಬದಲು ಇಡೀ ದಿನ ಮಿತ್ರರೊಂದಿಗೆ ಹೊರಗೇ ಇದ್ದ. ಅವನಿಗೆ ಗುಲಾಬಳನ್ನು ಎದುರಿಸುವ ಭಯ ಕಾಡಿದಂತಿತ್ತು. ಯಾವ ಭಯದಿಂದ ಅವನು ಓಡಿ ಹೋಗುತ್ತಿದ್ದನೋ, ಅದೇ ಈಗ ಅವನೆದುರಿಗೆ ಬಂದಿತ್ತು. ಹರಿಲಾಲ ತಲೆಯನ್ನು ತಗ್ಗಿಸಿದ–

'ಸ್ವಾಮಿ, ಈ ರೀತಿಯಲ್ಲಿ ನಾವು ಹೇಗೆ ಬದುಕಲು ಸಾಧ್ಯ?' ಗುಲಾಬ ಪತಿಯ ಹಣೆಯ ಮೇಲೆ ಕೈಯಿಟ್ಟು ಹೇಳಿದಳು ಅಲ್ಲದೆ..' ಹರಿಲಾಲ ಹೆಂಡತಿಯನ್ನು ನೋಡಿದ. ಅವಳ ಮುಖದಲ್ಲಿದ್ದ ವ್ಯಥೆಯನ್ನು ನೋಡಿ ಅವನ ಒಳ ಮನಸ್ಸು ನೊಂದಿತು. 'ಹೌದು... ಸ್ವಾಮಿ! ಇಂದು ನಮ್ಮ ಗೃಹಸ್ಥಜೀವನದಲ್ಲಿ ನಾಲ್ಕು ಜೀವಿಗಳಿವೆ.. ಆದರೆ... ಆದರೆ...' 'ಏನು ಗುಲಾಬ? ನೀನೇಕೆ ಹೇಳುವುದನ್ನು ನಿಲ್ಲಿಸಿದೆ?' ಹರಿಲಾಲ ಕಾತುರಗೊಂಡ.

'ಇನ್ನು ಕೆಲವೇ ದಿನಗಳಲ್ಲಿ ಇನ್ನೊಂದು ಜೀವಿ ಬರುವುದಿದೆ. ನಮ್ಮ ಮೂರನೆಯ ಮಗು...' ಗುಲಾಬ ಮುಂದಕ್ಕೆ ಮಾತನಾಡಲಿಲ್ಲ. ಹರಿಲಾಲ ಮತ್ತೆ ಕಳವಳಗೊಂಡ.

'ಅದಕ್ಕೇ ನನ್ನದೊಂದು ಮಾತನ್ನು ಕೇಳಿ' ಗುಲಾಬ ಆತ್ಮೀಯತೆಯಿಂದ ಹೇಳಿದಳು, "ನಾವು ಮರಳಿ ಆಫ್ರಿಕಾಕ್ಕೆ ಹೋಗೋಣ. ಬಾ ಮತ್ತು ಬಾಪೂ ಅವರೊಂದಿಗಿದ್ದರೆ ನಮ್ಮ ಗೃಹಸ್ಥ ಜೀವನ ಸುಗಮವಾಗಿ ಸಾಗುತ್ತದೆ. ಇಲ್ಲಿದ್ದು ಅಲೆದಾಡುವ ಬದಲು ಆಫ್ರಿಕಾದಲ್ಲಿ ಅವರ ಜೊತೆಗಿರುವುದು ಒಳ್ಳೆಯದು, ನಿಮಗೂ ಮತ್ತು ನಿಮ್ಮ ಮಕ್ಕಳಿಗೂ ಒಳ್ಳೆಯದು...' ಹರಿಲಾಲ ಹೆಂಡತಿಯನ್ನೇ ನೋಡಿದ. ಅವನ ಕಣ್ಣುಗಳೆದುರು ಅವನು ಆಫ್ರಿಕಾದಲ್ಲಿ ಕಳೆದ ದಿನಗಳು ಮೂಡಿದವು. ಜೋಹಾನ್ಸ್‌ಬರ್ಗ್‌ನಲ್ಲಿ ಬಾಪೂ ತನ್ನನ್ನು ಬೀಳ್ಕೊಟ್ಟ ದೃಶ್ಯ ನೆನಪಾಯಿತು. ಆಗ ಬಾಪೂ ಸಹ ವ್ಯಾಕುಲಗೊಂಡಿದ್ದರು. ಆಗ ಬಾ ಅವರ ಕಾಲುಗಳಿಗೆ ತಾನು ನಮಸ್ಕರಿಸಿದಾಗ, ಬಾ ಅವರು ಕಂಪಿಸುವ ಕೈಗಳಿಂದ ತನ್ನ ಬೆನ್ನನ್ನು ನೇವರಿಸಿದ್ದರು, ಈ ದೃಶ್ಯವನ್ನು ಸಹ ನೆನೆದು ಹರಿಲಾಲ ಕಂಪಿಸಿದ. ಅವನು ತನ್ನ ಮುಖವನ್ನು ಹೊರಳಿಸಿ ಗಾಢ ನಿದ್ರೆಯಲ್ಲಿದ್ದ ರಾಮಿ ಮತ್ತು ಕಾಂತಿಯನ್ನು ನೋಡಿದ. ಈ ಕಾಂತಿ ತನಗೆ ತುಂಬಾ ಪ್ರಿಯ, ಅಂತೆಯೇ ಒಂದು ಕಾಲದಲ್ಲಿ ಬಾಪೂ ಸಹ ತನ್ನನ್ನು ಪ್ರೀತಿಸುತ್ತಿದ್ದರು ಎಂದು ಯೋಚಿಸಿ ಹರಿಲಾಲ ಮತ್ತೆ ಕಂಪಿಸಿದ. 'ಗುಲಾಬ, ಒಂದು ವೇಳೆ ಇಲ್ಲಿ ನಿನಗೆ ಇರಲು ಇಷ್ಟವಿಲ್ಲದಿದ್ದರೆ, ನಾವು ಮರಳಿ ಬಾ ಮತ್ತು ಬಾಪೂ ಅವರ ಬಳಿಗೆ ಹೋಗೋಣ...' 'ಸ್ವಾಮಿ, ಬಾ ಮತ್ತು ಬಾಪೂ ಅವರ ಬಳಿಗೆ ಮರಳಿ ಹೋಗುವುದಕ್ಕೆ ಸಂಕೋಚವನ್ನು ಮಾಡಬಾರದು. ನೀವು ಬಾಪೂ ಅವರಿಗೆ ಪತ್ರವನ್ನು ಬರೆಯಿರಿ... ನಾನೂ ಸಹ ಆ ಪತ್ರದಲ್ಲಿ ಬರೆಯುತ್ತೇನೆ...' ಗುಲಾಬಳಿಗೆ ಸಂತೋಷವಾಯಿತು.

ಆದರೆ ಬ್ಯಾರಿಸ್ಟರ್ ಅಧ್ಯಯನಕ್ಕಾಗಿ ವಿದೇಶಕ್ಕೆ ಕಳುಹಿಸಲು ಛಗನ್‌ಲಾಲ್ ಮತ್ತು ಸೊರಾಬಜಿಯನ್ನು ಕಳುಹಿಸಿದ ವಿಷಯವನ್ನು ಹರಿಲಾಲ ಮರೆಯಲು ಸಾಧ್ಯವಾಗಿರಲಿಲ್ಲ, ಅದು ಅವನನ್ನು ಚೇಳಿನಂತೆ ಕುಟುಕುತ್ತಿತ್ತು. ಅವನು ಹೋರಾಟದಲ್ಲಿ ತೋರಿದ ಸಾಮರ್ಥ್ಯಕ್ಕೆ ಬಾಪೂ ಅವರ ದೃಷ್ಟಿಯಲ್ಲಿ ಮಹತ್ವವಿರಲಿಲ್ಲ. ಅಲ್ಲದೆ ಗುಲಾಬಳ ಮಾತಿನಲ್ಲೂ ಸಹ ತಪ್ಪಿರಲಿಲ್ಲ. ಅವನು ಮೂರನೆಯ ಮಗುವಿನ ತಂದೆಯಾಗುವವನಿದ್ದ, ಅವನ ಜವಾಬ್ದಾರಿ ಹೆಚ್ಚುತ್ತಿತ್ತು...ರಾತ್ರಿಯಿಡಿಯ ಅಲ್ಲೋಲಕಲ್ಲೋಲದ ನಂತರ ಅವನು ಮರುದಿನ ಬೆಳಿಗ್ಗೆ ಬಾಪೂ ಅವರ ಹೆಸರಿಗೆ ಪತ್ರವೊಂದನ್ನು ಬರೆದ–

'ಬಾಪೂಜಿ, ನಿಮ್ಮನ್ನು ಮತ್ತು ಬಾ ಅವರನ್ನು ಭೇಟಿಯಾಗಲು ನನ್ನ ಮನಸ್ಸು ವ್ಯಾಕುಲಗೊಳ್ಳುತ್ತಿದೆ. ನಾನು ಸತ್ಯಾಗ್ರಹದ ಹೋರಾಟದಲ್ಲಿ ನನ್ನನ್ನು ತೊಡಗಿಸಿಕೊಂಡಾಗ ಪ್ರತಿಜ್ಞೆಯನ್ನು ಮಾಡಿದ್ದೆ. ಮತ್ತೆ ನಾನು ಆಫ್ರಿಕಾಕ್ಕೆ ಬಂದು ಹೋರಾಟದಲ್ಲಿ ಭಾಗವಹಿಸಲು ನಿಮ್ಮ ಅನುಮತಿಯನ್ನು ಬಯಸುತ್ತೇನೆ...' **(ಸಶೇಷ)**